ಅ) ರಾಜ್ಯದಲ್ಲಿ ರಸ್ತೆಗಳನ್ನು ನಿರ್ಮಿಸಲು ಯಾವ ನಿಯಮಗಳನ್ನು ಅನುಸರಿಸಲಾಗುತ್ತಿದೆ;

ಆ) ಸರ್ಕಾರವು ಈ ನಿಟ್ಟಿನಲ್ಲಿ ರಸ್ತೆ ಕಾಯ್ದೆಯನ್ನು ಮಾಡಿರುವುದೇ;

ಇ) ಪ್ರಸಕ್ತ ನಿರ್ಮಿಸಲ್ಪಟ್ಟಿರುವ ರಸ್ತೆಗಳಿಗೆ ಹೊಂದಿಕೊಂಡಂತೆ ಇಕ್ಕೆಲಗಳಲ್ಲು, ಇಂತಿಷ್ಟು ಪ್ರಮಾಣದ ಖಾಲಿ ಜಾಗ ಬಿಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಭಾರತ ರಸ್ತೆ ಕಾಂಗ್ರೆಸ್ ನಿಯಮಗಳನ್ನು ಅನುಸರಿಸಲಾಗುತ್ತದೆ.

ಆ) ಮಾಡಿದೆ.

ಇ) ನಗರ ಪ್ರದೇಶ ವ್ಯಾಪ್ತಿಯಲ್ಲಿ ನಿಗದಿತ ಪ್ರಮಾಣದಷ್ಟು ಜಾಗ ಬಿಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮೈಸೂರು ಜಿಲ್ಲೆಯ ವರುಣಾ ನಾಲೆಯ ಪ್ರಗತಿ

122 (24) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯ ವರುಣಾ ನಾಲೆಯ ಯೋಜನೆ ಯಾವ ಹಂತದಲ್ಲಿದೆ, ಮತ್ತು ಅದನ್ನು ಯಾವಾಗ ಪೂರೈಸಲಾಗುವುದು;

ಆ) ಈ ವರ್ಷ ಈ ನಾಲೆಯ ಯೋಜನೆಗೆ ಬಿಡುಗಡೆ ಮಾಡಿದ ಹಣವೆಷ್ಟು;

ಇ) ಈ ಯೋಜನೆಯ ಕಾರ್ಯದ ಮದ್ಯದಲ್ಲಿ ನ್ಯಾಯಾಲಯದ ತಡೆಯಾಜ್ಞೆ ರದ್ದಾಗಿದೆಯೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಮುಖ್ಯ ನಾಲೆಯು 50ನೇ ಕಿ.ಮೀ.ವರೆಗೆ ಮತ್ತು 20ನೇ ಕಿ.ಮೀ.ವರೆಗಿನ ವಿತರಣಾ ನಾಲೆಗಳು ಪೂರ್ಣಗೊಳ್ಳುತ್ತಿವೆ. ಮುಖ್ಯ ನಾಲೆಯ 50ನೇ ಕಿ.ಮೀ.ನಿಂದ 62 ಕಿ.ಮೀ.ವರೆಗಿನ ಮತ್ತು 20ನೇ ಕಿ.ಮೀ.ಯಿಂದ 50ನೇ ಕಿ.ಮೀ.ವರೆಗಿನ ವಿತರಣಾ ನಾಲೆಗಳು ಹಾಗೂ 18ನೇ ಕಿ.ಮೀ.ನಲ್ಲಿನ ಅಕ್ವಿಡಕ್ಟ್‌ಗೆ ಸಂಬಂಧಪಟ್ಟ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) 8.00 ಕೋಟಿ ರೂಪಾಯಿಗಳು

ಇ) ಈ ನಾಲೆಯ ಹೆಡ್‌ವರ್ಕ್ಸ್ ಕಾಮಗಾರಿಯ ಮೇಲೆ ನ್ಯಾಯಾಲಯವು ವಿಧಿಸಿರುವ ತಡೆಯಾಜ್ಞೆಯನ್ನು ಇನ್ನೂ ತೆರವು ಮಾಡಿಲ್ಲ.

ತುಂಗಾ ಮೇಲ್ದಂಡೆ ಯೋಜನೆಯ ಪ್ರಗತಿ

123 (77) ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆ ಯೋಜನೆಯ ಪ್ರಗತಿಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಕೇಂದ್ರ ಸರ್ಕಾರದ ಮನ್ನಣೆ ಪಡೆದಿದೆಯೇ;